3. ನಿಯಮ 69ರ ಅಡಿಯಲ್ಲಿ ಮುಂದುವರೆದ ಚರ್ಚೆ:

ವಿಷಯ: Electricity ಯಲ್ಲಿ high cost current ಖರೀದಿ ಮಾಡಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೇ, ನಾನು ಒಂದನೇ ತಾರೀಖು ನಿಯಮಾವಳಿ 60ರಲ್ಲಿ ಒಂದು ನಿರ್ಣಯ ಕೊಟ್ಟಿದ್ದೆ. ಅದನ್ನು ತಾವು ಬೇರೆ ರೂಪದಲ್ಲಿ ಕೊಡಿ ಎಂದು ಹೇಳಿದ್ದಿರಿ. ಅದನ್ನು ಮತ್ತೆ ಇವತ್ತು ಸಹ ನಾನು ನಿಯಮ 60ರಲ್ಲಿ ಒಂದು ನಿರ್ಣಯವನ್ನು ಕೊಟ್ಟಿದ್ದೆ ಅದನ್ನು ತಾವು ತಿರಸ್ಕಾರ ಮಾಡಿದ್ದೀರಿ. ಆದರೂ ಪರಿಶೀಲನೆ ಮಾಡಿ ಎಂದು ಹೇಳಿದ್ದೆನು. ನಿನ್ನೆ ಇಂಧನ ಇಲಾಖೆಯ ಬಗ್ಗೆ ಮುಖ್ಯಮಂತ್ರಿಗಳು ನಾವು ಮಾಡಿದಂಥ ವಿಷಯದ ಬಗ್ಗೆ ವಿರೋಧ ಪಕ್ಷದ ನಾಯಕರು ಮಾಡಿದಂಥ, ಇಂಧನ ಇಲಾಖೆಯಲ್ಲಿ ನಾವು ಮಾಡಿದ ಬಗ್ಗೆ clarification ಕೇಳಬೇಕು ಎಂದು ತಮ್ಮನ್ನು ಕೇಳಿದೆವು. ತಾವು clarificationಗೆ ಅವಕಾಶ ಕೊಡಲಿಲ್ಲ. ಆದರೂ ಸನ್ಮಾನ್ಯ ಮುಖ್ಯಮಂತ್ರಿಗಳು ನನ್ನ ಮೇಲೆ ನೇರವಾಗಿ ಆಪಾದನೆ ಮಾಡಿದ್ದಾರೆ. ಒಂದು ನೇರವಾಗಿ ಎಂ.ಎ.ಎಂ.ರಾಮಸ್ವಾಮಿ ರಾಜ್ಯಸಭಾ ಸದಸ್ಯರು, ಅವರಿಗೆ ನಾವು.. ಇವತ್ತು ಪತ್ರಿಕೆಯಲ್ಲಿ ಬಂದಿರುವುದನ್ನು ತಮ್ಮ ಮುಂದೆ ಓದಿಬಿಡುತ್ತೇನೆ, "13 ದಿನಗಳ ಕಾಲ ಅಧಿಕಾರದಲ್ಲಿದ್ದಾಗ ರಾಜೀನಾಮೆ ಕೊಟ್ಟ 13 ಜನ ಮಂತ್ರಿಮಂಡಲದಲ್ಲಿ ಸಚಿವ ಸಂಪುಟ ಸಭೆಗೆ...." ಏಕೆಂದರೆ, ಉದಯವಾಣಿ, ಪ್ರಜಾವಾಣಿ, ಹಿಂದೂ ಪತ್ರಿಕೆಗಳಲ್ಲಿ ಬಂದಿದೆ. ಸಚಿವ ಸಂಪುಟದ 13 ಜನ ಸದಸ್ಯರುಗಳು ಶ್ರೀ ಎಂ.ಎ.ಎಂ. ರಾಮಸ್ವಾಮಿಯವರಿಗೆ ರಾಜೀನಾಮೆ ಕೊಟ್ಟಿದ್ದಾರೆ ಎಂದು ನೇರವಾಗಿ ನನ್ನ ಮೇಲೆ ಆಪಾದನೆ ಮಾಡಿದ್ದಾರೆ. ಮತ್ತೆ ನಿನ್ನೆ ನಾನು ಇಂಧನ ಇಲಾಖೆಯಲ್ಲಿ ನಡೆದಿರುವ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕು ಎಂದು ಹೇಳಿದಾಗ ಕಾನೂನು ಸಚಿವರು ನೋಟಿಸ್ ಕೊಟ್ಟು ಮಾತನಾಡಿ ಎಂದು ಹೇಳಿದರು. ನೋಟೀಸ್ ಕೊಟ್ಟು ಮಾಡಿ ಎಂದು ಕಾನೂನು ಸಚಿವರು ಹೇಳಿದರು. ಅದಕ್ಕೋಸ್ಕರ ಇವತ್ತು ನಿಯಮ 60ರಲ್ಲಿ ನೋಟೀಸ್ ಕೊಟ್ಟು ಇಂಧನ ಇಲಾಖೆಯಲ್ಲಿ ಏನೇನು ನಡೆದಿದೆ ಅದರ ಬಗ್ಗೆ

ಸವಿಸ್ತಾರವಾಗಿ ತರಬೇಕು ಎನ್ನುವ ದೃಷ್ಟಿಯಿಂದ ಕೊಟ್ಟಿದ್ದೇನೆ. ಇಂಧನ ಇಲಾಖೆಯಲ್ಲಿ high cost current, 2597 ಕೋಟಿ ಖರೀದಿ ಮಾಡಿರುವುದು ಇರಬಹುದು, ಯಾವ್ಯಾವ ರಾಜ್ಯದಲ್ಲಿ ಎನ್ನುವುದನ್ನು ನಿನ್ನೆ clarification ಕೊಡಲೇ ಇಲ್ಲ. 26 ಸಾವಿರ ಕೋಟಿ ಬಾಕಿ ಇದೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಾನು ಇದರಲ್ಲಿ 115 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದೇನೆ. ಕರೆಂಟ್ ಕದಿಯುವವರ ಮೇಲೆ ಸುಮಾರು ಇಷ್ಟು ಪ್ರಕರಣಗಳನ್ನು ಹಾಕಿ, ಕೇಸ್‌ಗಳನ್ನು ಹಾಕಿ, 26 ಸಾವಿರ ಕೋಟಿ ರೂಪಾಯಿ ಕೊಡಬೇಕಾದರೆ, ಯಾರು ಕೊಡುತ್ತಾರೆ ? ರೈತರು ಕೊಡಬೇಕೇ ಅಥವಾ ಯಾರಾದರೂ ದೊಡ್ಡವರು ಕೊಡಬೇಕೇ ? ಏಕೆ 26 ಸಾವಿರ ಕೋಟಿ ಹಣವನ್ನು ವಸೂಲಾತಿ ಮಾಡಿಲ್ಲ ? ಇದು ಒಂದು ಭಾಗ. ಎರಡನೇ ಭಾಗ, ನಾನು ಇದನ್ನು ರಾಮಸ್ವಾಮಿಯವರಿಗೆ ಏನೋ ಒಂದು favour ಮಾಡಿದ್ದೇನೆ ಎನ್ನುವುದನ್ನು ಹೇಳಿದ್ದಾರೆ. ಏಕೆಂದರೆ, ನಾನು ರಾಮಸ್ವಾಮಿಯವರಿಗೆ ನೇರವಾಗಿ ಪತ್ರ ಕೊಟ್ಟು, ಅವರಿಗೆ ಕಂಟ್ರಾಕ್ಟ್ ಕೊಡಿ ಎಂದು ಕೇಳಿದ್ದೇನಾ ? ಕಂಟ್ರಾಕ್ಟ್ ಯಾರು ಬರುತ್ತಾರೋ ಯಾರು ಬಿಡುತ್ತಾರೋ ನನಗೆ ಗೊತ್ತಿಲ್ಲ. ಕಾನೂನು ರೀತಿಯಲ್ಲಿ ಇದ್ದರೆ ಕೊಡುತ್ತಾರೆ, ಕಾನೂನು ರೀತಿಯಲ್ಲಿ ಇಲ್ಲದಿದ್ದರೆ ಕೊಡುವುದಿಲ್ಲ. ನಾನೇನಾದರೂ ಟೆಂಡರ್‌ನಲ್ಲಿ ಇಂಥವರಿಗೇ ಕೊಡಬೇಕೆಂದು writing ನಲ್ಲಿ ಏನಾದರೂ ಮಾನ್ಯ ಮುಖ್ಯಮಂತ್ರಿಗಳು letter ಕೊಟ್ಟಿದ್ದಾರಲ್ಲಾ, ಆ ರೀತಿ ಕೊಟ್ಟಿಲ್ಲ. ಏಕೆಂದರೆ ಮುಖ್ಯಮಂತ್ರಿಗಳು ಅಧಿಕಾರಿಗಳು ಬೇಡವೆಂದರು. ಉದಾಹರಣೆಗೆ ಹೇಳುವುದಾದರೆ, ರಾಜ್ಯದ ಒಂದು ನ್ಯಾಯಾಲಯ, ನ್ಯಾಯಾಧೀಶರು ಕೊಟ್ಟಂಥ ತೀರ್ಪು, ತೀರ್ಪಿನಲ್ಲಿ ಏನು ಕೊಟ್ಟಿದ್ದಾರೆ ಎನ್ನುವುದನ್ನು ಅದನ್ನೂ ಮಾನ್ಯ ಸಭಾಧ್ಯಕ್ಷರೆ, ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : Brief ಮಾಡಿ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಅಲ್ಲ ಓದಬೇಕಾಗುತ್ತದೆ. ಒಬ್ಬ ಹಾಲಿ ನ್ಯಾಯಾಧೀಶರು ಕೊಟ್ಟಂಥ ತೀರ್ಪನ್ನು ಒಬ್ಬ retired Judge ಅದನ್ನು review ಮಾಡುವ ಅಧಿಕಾರ ಇದೆಯೇ ? ನಾನು ಇಷ್ಟೇ ಕೇಳುವುದು, ಒಬ್ಬ

ಹಾಲಿ ನ್ಯಾಯಾಧೀಶರು Single Bench, Double Bench ನಲ್ಲಿ ಕೊಟ್ಟಿರತಕ್ಕಂಥ ತೀರ್ಪನ್ನು ಇವತ್ತು retired judge re-enquiry ಮಾಡುವುದಕ್ಕೆ ಅವಕಾಶ ಇದೆಯೇ ? ಇಲ್ಲಿ ಬೇಕಾದರೆ ತಮಗೆ ಅದನ್ನು ಓದುಬಿಡುತ್ತೇನೆ. ಮಾನ್ಯ ಅಧ್ಯಕ್ಷರೆ, MMTC ವಿಭಾಗೀಯ ಪೀಠಕ್ಕೆ, ನೇರವಾಗಿ 6 ಲಕ್ಷ ಟನ್, ಒಂದೇ ಸಲ 12 ಲಕ್ಷ ಟನ್‌ಗೆ ಕರೆದರು. ನೇರವಾಗಿ ಟೆಂಡರ್‌ನಲ್ಲಿ ಮಾಡಲಿಲ್ಲ. MMTC ಗೆ 6 ಲಕ್ಷ ಟನ್ ಕಲ್ಲಿದ್ದಲು ಕೊಟ್ಟರು. ಅದರಲ್ಲಿ ಏನು ಹೇಳುತ್ತಾರೆಂದರೆ, ಇಲಾಖೆ ಬೇಡಿಕೆ ಇಲ್ಲ, ಮುಖ್ಯಮಂತ್ರಿಗಳ ಒಂದು letter ಆಧಾರದ ಮೇಲೆ ಮಾತ್ರ ಕೊಟ್ಟಿದ್ದೀರೆಂದು Single Bench ನಲ್ಲಿ order ಆಗಿ, ಅದನ್ನು clear ಆಗಿ ತಿರಸ್ಕಾರ ಮಾಡಿದ್ದಾರೆ ಮತ್ತೆ Double Bench ನಲ್ಲೂ ಅದನ್ನೇ same ಹೇಳಿದ್ದಾರೆ. ಅದಕ್ಕೋಸ್ಕರ ನಾನು ಕೇಳುವುದೇನೆಂದರೆ, ಒಬ್ಬ retired Judge, ಹಾಲಿ ನ್ಯಾಯಾಧೀಶರು ಮಾಡಿದಂಥ ಆದೇಶವನ್ನು review ಮಾಡುವಂಥ ಅಧಿಕಾರವಿದೆಯೇ ಎಂದು ಮೊದಲನೇ ಪ್ರಶ್ನೆ ಕೇಳುತ್ತಿದ್ದೇನೆ. Single Bench, Double Benchನಲ್ಲಿ ನೇರವಾಗಿ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದಾರೆ. ಬೇಕಾದರೆ ಇಲ್ಲಿ ಕಡತ ಇದೆ. ತಮಗೆ ಕಳುಹಿಸಿಕೊಡುತ್ತೇನೆ. ದಯಮಾಡಿ ತಾವು ಪೂರ್ತಿ ಪರಿಶೀಲನೆ ಮಾಡಿ, MMTC ಕಂಪನಿ ಮತ್ತು ಭಾಟಿಯಾ ಕಂಪನಿಯದ್ದು ಎರಡೂ ಕಡತ ಕಳುಹಿಸಿಕೊಡುತ್ತೇನೆ. ಇದನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತಿದ್ದೇನೆ. ಅದರ ಬಗ್ಗೆ ನಿರ್ಧಾರ ಮಾಡುವುದು ತಮಗೆ ಬಿಡುತ್ತೇನೆ. ಒಬ್ಬ ಹಾಲಿ ನ್ಯಾಯಾಧೀಶರು ಮಾಡಿದಂಥ ಆದೇಶವನ್ನು ಒಬ್ಬ retired Judge review ಮಾಡುವುದನ್ನು ಇಡೀ ರಾಷ್ಟ್ರದ ಇತಿಹಾಸದಲ್ಲಿ ಎಲ್ಲಾದರೂ ಮಾಡಿದ್ದಾರಾ ? ಆ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಇನ್ನೊಂದು ನನ್ನ ಮೇಲೆ ಕಲ್ಲಿದ್ದಲಿನ ಬಗ್ಗೆ ಹೇಳಿದ್ದಾರೆ. ಅವರು ಒಂದು ಮಾತನ್ನು ಹೇಳಿದರು. ಅದನ್ನೂ ಕೊಡುತ್ತೇನೆ. ಭಾಟಿಯಾ ಕಂಪನಿಯದ್ದು ಇದೆ. ಅದನ್ನೂ ಆಮೇಲೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಮುಖ್ಯಮಂತ್ರಿಗಳಿಗೆ ಸವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಒಂದು ದಿವಸ ನಿಗದಿಪಡಿಸಿ ಎಂದು ಹೇಳಿದೆ. ನನ್ನ ಕಾಲದಲ್ಲಿ ಏನಾಗಿದೆ, ನಾನು 36 ತಿಂಗಳು ಇಂಧನ ಮಂತ್ರಿಯಾಗಿದ್ದ ಕಾಲದಲ್ಲಿ ಅಥವಾ ಲೋಕೋಪಯೋಗಿ ಮಂತ್ರಿಯಾಗಿದ್ದ ಕಾಲದಲ್ಲಿ ಏನೇನಾಗಿದೆ ಎನ್ನುವುದರ ಬಗ್ಗೆ ಯಾವುದೇ ತನಿಖೆ ನಡೆಸಿದರೂ ನಾನು ಸಿದ್ಧನಿದ್ದೇನೆ. ಆದರೆ ಅವರು ಒಂದು ಮಾತನ್ನು ಹೇಳಿದ್ದಾರೆ, ನಾನು 20 ತಿಂಗಳು ಉಪಮುಖ್ಯಮಂತ್ರಿಯಾಗಿ, 18 ತಿಂಗಳು ಮುಖ್ಯಮಂತ್ರಿಯಾಗಿ, ನಾನು ಮುಖ್ಯಮಂತ್ರಿಯಾಗಿ ಏನೇನು ಮಾಡಿದ್ದೇನೆ, ಅದಕ್ಕೆಲ್ಲಾ ತನಿಖೆ ನಡೆಸಲು ನಾನು ಸಿದ್ಧನಿದ್ದೇನೆಂದು ಅವರು ಸದನದಲ್ಲಿ ಮೊದಲೇ ಹೇಳಿದ್ದಾರೆ. ದಯಮಾಡಿ ಸಿ.ಬಿ.ಐ.ಗೆ ಆದರೂ ಕೊಡಲಿ, ಅವರು ಪ್ರಾಮಾಣಿಕರು, ನಾನು ಅಪ್ರಾಮಾಣಿಕರು, ಏಕೆಂದರೆ ಅವರು ಮುಕ್ತವಾಗಿರುವಾಗ ಅದಕ್ಕೆ ಏಕೆ ಹೆಸರಬೇಕಾಗುತ್ತದೆ ? ಸಿ.ಬಿ.ಐ. ಅವರಿಗೆ ವಹಿಸುವುದು ಬೇಡ ಅವರಿಗೆ ಏನಾದರೂ ಅನುಮಾನವಿದ್ದು, ಸಿದ್ದರಾಮಯ್ಯನವರ influence ಮಾಡಿ ಅವರ ಪರ ವಿರುದ್ಧ ಮಾಡಿಸುತ್ತಾರೆ ಎನ್ನುವ ಅನುಮಾನ ಇದ್ದರೆ, ಲೋಕಾಯುಕ್ತಕ್ಕಾದರೂ ಕೊಡಲಿ. ಲೋಕಾಯುಕ್ತದ ಮೇಲೂ ಅನುಮಾನ ಇಲ್ಲವೆಂದರೆ, ಅದು ಯಾರು Judge ಹೇಳಿ ಸ್ವಾಮಿ, ಏಕೆಂದರೆ ಹಾಲಿ ನ್ಯಾಯಾಧೀಶರ ಆದೇಶವನ್ನು retired Judge ಅವರು enquiry ಮಾಡುವುದಕ್ಕಾಗುತ್ತದೆಯೇ ಎಂದು ನಾನು ಒಂದೇ ಪ್ರಶ್ನೆ ಕೇಳುತ್ತಿರುವುದು. ಮುಖ್ಯಮಂತ್ರಿಗಳ letter ಆಧಾರದ ಮೇಲೆ ಇವತ್ತು 12 ಲಕ್ಷ ಟನ್ ಕಲ್ಲಿದ್ದಲ್ಲನ್ನು 2 ಸಾವಿರ ರೂಪಾಯಿ ಇರುವ ಕಲ್ಲಿದ್ದಲ್ಲನ್ನು 7,800 ರೂಪಾಯಿಗೆ ಖರೀದಿ ಮಾಡಿರುವುದು, 2 ಸಾವಿರ ರೂಪಾಯಿಗೆ Indian coal ಸಿಗುತ್ತದೆ. ಅದನ್ನು ಬಿಟ್ಟು, ನನಗೆ ಹೇಳಿದರು, ರಾಯಚೂರಿನಿಂದ 2003ನೇ ಇಸವಿಯಿಂದ ನಾನಲ್ಲ. ಒರಿಸ್ಸಾದಲ್ಲಿ ರಾಮಸ್ವಾಮಿಗೆ ಕೊಟ್ಟರು, ರಾಮಸ್ವಾಮಿಗೆ ಕೊಡುವುದಕ್ಕಿಂಥ ಹಿಂದೆ ಯಾರ್ಯಾರಿಗೆ ಟೆಂಡರ್ ಕೊಟ್ಟಿದ್ದರು ಎನ್ನುವುದನ್ನು ಹೇಳಲಿ. ಯಾವ್ಯಾವ ಕಂಪನಿಗೆ ಕೊಟ್ಟಿದ್ದರು ಎಂದು ಒರಿಸ್ಸಾದಿಂದ ತರಿಸುತ್ತಾರೆ. ರೈಲು

ಮಾರ್ಗದಲ್ಲಿ ರೈಲು ಇಲ್ಲವೆಂದರೆ, ಬೋಗಿಯನ್ನೇ ಕೊಡದೇ ಹೋದರೆ ಯಾವುದರಲ್ಲಿ ತರಿಸುತ್ತಾರೆ ? ಅದನ್ನು ಹೇಳಲಿ. ನಾನೇನಾದರೂ ಟೆಂಡರ್ ಇಂಥವರಿಗೇ ಕೊಡಬೇಕು, ರೈಲು ಮಾರ್ಗದಲ್ಲೇ ತೆಗೆದುಕೊಂಡು ಬನ್ನಿ, ಸಮುದ್ರ ಮಾರ್ಗದಲ್ಲೇ ತೆಗೆದುಕೊಂಡು ಬನ್ನಿ, 348 ಕಿ.ಮೀ. ಇದು ಕೊಡು ಎಂದು ನಾನೇನಾದರೂ writing ನಲ್ಲಿ ಕೊಟ್ಟುಬಿಟ್ಟಿದ್ದರೆ ಒಬ್ಬ ಇಂಧನ ಮಂತ್ರಿಯಾಗಿ ಅಥವಾ ಕುಮಾರಸ್ವಾಮಿಯವರೇ ಕೊಟ್ಟಿದ್ದರೆ, ಅವರ ಮೇಲೂ ಬೇಕಾದರೆ ಏನು ಬೇಕೋ ಶಿಕ್ಷೆ ಮಾಡಿ, ನಾನು ಬೇಡ ಎನ್ನುವುದಿಲ್ಲ. ಆದರೆ ಇದನ್ನು ಸುಮ್ಮನೆ ಹೇಳಿಬಿಟ್ಟು, ವಿಷಯ ತಿಳಿಯದೇ, ರಾಜ್ಯದ ಜನತೆಗೆ ಎಂ.ಎ.ಎಂ. ರಾಮಸ್ವಾಮಿ ಮತ್ತು ರೇವಣ್ಣ ಏನೋ ಮಾಡಿಬಿಟ್ಟಿದ್ದಾರೆ ಎನ್ನುವ ಭಾವನೆ ಬರಬಾರದು. ಇವತ್ತು ಪೂರ್ತಿ ಏನೇನು ಇದೆ, MMTC ಇರಬಹುದು ಮತ್ತು 2597 ಕೋಟಿ high cost current ಅನ್ನು ಜಿಂದಾಲ್ ಕಂಪನಿ ಇರಬಹುದು. ಎಲ್ಲೆಲ್ಲಿಂದ ತರಿಸಿದ್ದಾರೆ ಅದನ್ನೆಲ್ಲಾ ತನಿಖೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆಯೋ ಇಲ್ಲವೋ? ರಾಜ್ಯದ ರೈತರಿಗೆ ಇವತ್ತು ಎರಡು ಗಂಟೆ ಕರೆಂಟ್ ಕೊಡುತ್ತಿಲ್ಲ. ಗ್ರಾಮೀಣ ಪ್ರದೇಶಕ್ಕೆ ಎಷ್ಟು ಗಂಟೆಗಳ ಕಾಲ ಕರೆಂಟ್ ಕೊಡುತ್ತೇವೆಂದು ನಿನ್ನೆ ಹೇಳಲಿಲ್ಲ. ಕಾರ್ಪೋರೇಷನ್ ಎಲೆಕ್ಷನ್ ಬರುತ್ತಿದೆ ಎಂದು ಬೆಂಗಳೂರು ನಗರಕ್ಕೆ 23 ಗಂಟೆ ಕರೆಂಟ್ ಕೊಡುತ್ತೇವೆಂದು ಹೇಳುತ್ತೀರಿ. ಅದೇ ಗ್ರಾಮೀಣ ಪ್ರದೇಶಗಳಲ್ಲಿ ಕರೆಂಟ್ ಕೊಡುವುದಕ್ಕೆ ಏನಾಗಿದೆ ? 6 ಗಂಟೆಯಷ್ಟು ವಿದ್ಯುತ್ ಬರುತ್ತಿಲ್ಲ. ನಾನು ವಿಚಾರ ಮಾಡಿದ್ದೇನೆ. ನಿನ್ನೆಯಿಂದ ಹೇಳಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ : ಇವತ್ತು ಬರುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಆಯಿತು, ಇವತ್ತೇ ಬರಲಿ, ಸತತವಾಗಿ 6 ಗಂಟೆಗಳ ಕಾಲ ವಿದ್ಯುತ್ ಕೊಡಲಿ. ನನ್ನದೇನೂ ಅಭ್ಯಂತರವಿಲ್ಲ. ದಯಮಾಡಿ high cost current, 2,597 ಕೋಟಿಯದ್ದು ಇರಬಹುದು, MMTC ಹಾಗೂ ಭಾಟಿಯಾ ಕಂಪನಿಯ 12 ಲಕ್ಷ ಟನ್ ಅನ್ನು 2 ಸಾವಿರ ರೂಪಾಯಿಗೆ ಸಿಗುವುದನ್ನು 7,800 ರೂಪಾಯಿ ಕೊಟ್ಟು ಖರೀದಿ ಮಾಡಿ, ಕೋಟ್ಯಾಂತರ ರೂಪಾಯಿ ಅಂದರೆ ಕನಿಷ್ಠ 500 ಕೋಟಿ ರೂಪಾಯಿ,

ನೇರವಾಗಿ ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳೇ involve ಆಗಿದ್ದಾರೆ ಎನ್ನುವುದನ್ನು ಹೇಳಬೇಕಾಗುತ್ತದೆ. ಅದಕ್ಕೋಸ್ಕರ ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಈ ಆಪಾದನೆಯನ್ನು ಬೇಕಾದರೆ ದಾಖಲೆ ಸಮೇತ prove ಮಾಡುವುದಕ್ಕೂ ರೆಡಿ ಇದ್ದೇನೆ.

ಅಧ್ಯಕ್ಷರು : ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲುಬಿಲ್ಲದ ನಾಲಿಗೆ ಏನು ಬೇಕಾದರೂ ಮಾತನಾಡುವುದು.

ಶ್ರೀ ಹೆಚ್.ಡಿ. ರೇವಣ್ಣ : ನೋಡಿ, ದಯಮಾಡಿ ಎಲುಬಿಲ್ಲದ ನಾಲಿಗೆ ಎಂದು ಹೇಳುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ನೀವು ಮಾತನಾಡುವಾಗ ಅವರು ಸುಮ್ಮನಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುತ್ತಿದ್ದೇನೆ ಎನ್ನುವುದನ್ನು ಕೇಳಿಸಿಕೊಳ್ಳಿ ಆಮೇಲೆ ನೀವು ಯಾವ ಭಾಷೆಯಲ್ಲಿ ಹೇಳಬೇಕೋ ಆ ಭಾಷೆಯಲ್ಲಿ ನಮಗೆ ಉತ್ತರ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ಆಯಿತು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಈ ಮನೆಯಲ್ಲಿ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಇದು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ ಎಂದು ಆಗುತ್ತದೆ. One line regulation ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯಮಾಡಿ ಮಾನ್ಯ ಸದಸ್ಯರು ಮಧ್ಯ ಮಧ್ಯೆ ಎದ್ದು ನಿಂತುಕೊಳ್ಳಬಾರದು. ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುವವರೆಗೂ ಮೇಲೆ ಏಳಬಾರದೆಂದು ಅವರಿಗೆ ಹೇಳಿ. ಗೌರವದಿಂದ ನಡೆದುಕೊಳ್ಳುವುದನ್ನು ಅವರಿಗೆ ಕಲಿಸಿ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಾಲಕೃಷ್ಣರವರೆ, ನಾನು ಮಾತನಾಡಬೇಕಾದರೆ ಮಾತನಾಡಬೇಡಿ. ನಾನು ಮಾತನಾಡುವುದು ಗೊತ್ತಿದೆ. ಮೊದಲು ಕುಳಿತುಕೊಳ್ಳಿ.

ಅಧ್ಯಕ್ಷರು : ಮಾನ್ಯ ಬಾಲಕೃಷ್ಣರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಮಾತು. ಈಗ ಚರ್ಚೆಗೆ ಅವಕಾಶ ಇದೆಯೇ ?

ಅಧ್ಯಕ್ಷರು : ಇದು ಚರ್ಚೆಯಲ್ಲ, ಅವರು ಹೇಳಿದ್ದಕ್ಕೆ ಉತ್ತರ ಅಷ್ಟೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರು ಏನೋ ಹೇಳಿದರೆ ಚರ್ಚೆಗೆ ಅವಕಾಶ ಕೊಟ್ಟಂಥಾಗುತ್ತದೆ ಅಲ್ಲವೇ ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಇಲ್ಲ. ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ ಒಂದು clarification. ಚರ್ಚೆಗೆ ಅವಕಾಶವಿದೆಯೇ ?

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ ನಾನು ಹೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ತಮ್ಮ ಕೊಠಡಿಯಲ್ಲಿ ಏನು ನಡೆಯಿತು ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು : ನೀವು ಮೊದಲು ಕುಳಿತುಕೊಳ್ಳಿ ತೀರ್ಮಾನ ಏನು ಎನ್ನುವುದನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಾನು ಸಿದ್ಧನಿದ್ದೇನೆ.

ಅಧ್ಯಕ್ಷರು : ಚರ್ಚೆಗೆ ಅವಕಾಶ ಅಲ್ಲ. ನೀವು ಹೇಳಿದ್ದಕ್ಕೆ ಉತ್ತರ ಹೇಳುತ್ತಾರೆ ಅಷ್ಟೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಸನ್ಮಾನ್ಯ ರೇವಣ್ಣನವರು ಹೇಳಿದ ಮೇಲೆ ಅವರ ಮಾತಿಗೆ ಗೌರವ ಕೊಡುವುದು ಬೇಡವೇ ?

ಶ್ರೀ ಹೆಚ್.ಡಿ. ರೇವಣ್ಣ : ಇವತ್ತು ನಾನು ಆಪಾದನೆ ಮಾಡುತ್ತಿದ್ದೇನೆ. ಅದು ದಾಖಲೆ ಸಮೇತ ಇದೆ.

ಅಧ್ಯಕ್ಷರು : ಬಾಲಕೃಷ್ಣರವರೆ, ತಾವು ಪ್ರತಿಯೊಂದಕ್ಕೂ ಎದ್ದು ನಿಂತುಕೊಳ್ಳುವುದು ಸರಿಯಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಒಂದು ಕಡೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳುತ್ತೀರಿ, ಮತ್ತೆ ಅವರು ಏನಾದರೂ ಹೇಳುವುದಕ್ಕೆ ಹೋದರೆ ಬೇಡ ಎನ್ನುತೀರಿ. ಏನು ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ನನ್ನ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ದಿನಾಂಕ: 28.03.2008 ರಂದು ಕೆಪಿಸಿಎಲ್ ಕಂಪನಿಯಿಂದ 6 ಲಕ್ಷ ಟನ್ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವುದಕ್ಕೆ ಆದೇಶ ಮಾಡಿದ್ದರು. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಒಟ್ಟು 12 ಕಂಪನಿಗಳು ಭಾಗವಹಿಸಿದ್ದವು. ಅವುಗಳ ಪೈಕಿ 4 ಕಂಪನಿಗಳು ಮಾತ್ರ ಎಲ್ಲಾ ಷರತ್ತುಗಳನ್ನು ಪೂರೈಕೆ ಮಾಡಿತ್ತು. ಆ 4 ರಲ್ಲಿ ಮೂರು ಕಂಪನಿಗಳು ಅಂತಿಮ Financial bidನ್ನು ಸಲ್ಲಿಸಿದ್ದವು. ಆ ಮೂರು ಕಂಪನಿಗಳಲ್ಲಿ ಭಾಟಿಯಾ ಇಂಟರ್ ನ್ಯಾಷನಲ್ ಕಂಪನಿ ಅತ್ಯಂತ ಕಡಿಮೆ ದರವನ್ನು ನೀಡಿತ್ತು. ಅಂದರೆ ಪ್ರತಿ ಟನ್ ಕಲ್ಲಿದ್ದಲಿಗೆ 7,967 ರೂ. ದರವನ್ನು ನೀಡಿತ್ತು. ಅದನ್ನು ಮಾತುಕತೆಯ ಮೂಲಕ ಇನ್ನಷ್ಟು ಕಡಿಮೆ ಮಾಡಲು ಸೂಚನೆ ನೀಡಿ, ಆ ಪ್ರಕಾರ ಮಾತುಕತೆಯಲ್ಲಿ ಸದರಿ ಕಂಪನಿ ಪ್ರತಿ ಟನ್‌ಗೆ 68 ರೂಪಾಯಿಯಷ್ಟು ರಿಯಾಯಿತಿಯನ್ನು ನೀಡಿತು. ಈ ರೀತಿ ಕಡಿಮೆ ಮಾಡಿದ್ದರಿಂದ ಕೆಪಿಸಿಎಲ್ ಗೆ 4 ಕೋಟಿ 8 ಲಕ್ಷ ರೂಪಾಯಿ ಉಳಿತಾಯವಾಯಿತು. ಹೀಗಾಗಿ ಪ್ರತಿ ಟನ್‌ಗೆ 7,899 ರೂ. ದರ ನಿಶ್ಚಯವಾಯಿತು. ಆ ದರದಂತೆ 6 ಲಕ್ಷ plus 15 ಪರ್ಸೆಂಟ್ ಹೆಚ್ಚುವರಿ

ಕಲ್ಲಿದ್ದಲನ್ನು ಪೂರೈಕೆ ಮಾಡುವುದಕ್ಕೆ ಭಾಟಿಯಾ ಇಂಟರ್ ನ್ಯಾಷನಲ್ ಕಂಪನಿಗೆ 12.08.2008 ರಂದು ಆದೇಶ ನೀಡಲಾಗಿತ್ತು. ಆ ಪ್ರಕಾರ ಕಂಪನಿ ಕಲ್ಲಿದ್ದಲನ್ನು ಪೂರೈಕೆ ಮಾಡಲು ಪ್ರಾರಂಭ ಮಾಡಿತು. ಅಂತಿಮ ಪ್ರಮಾಣದ ಕಲ್ಲಿದ್ದಲನ್ನು ಪೂರೈಕೆ ಮಾಡುವುದಕ್ಕೆ ಮೊದಲೇ 17.04.2009, ಅಂದರೆ 8 ತಿಂಗಳ ನಂತರ ಕೆಪಿಸಿಎಲ್ ವತಿಯಿಂದ 6 ಲಕ್ಷ ಟನ್ ಗರಿಷ್ಠ ಪ್ರಮಾಣದಲ್ಲಿ ಶೇಕಡ 15 ರಷ್ಟನ್ನು ಕಡಿಮೆ ಮಾಡಿ 5 ಲಕ್ಷ 10 ಸಾವಿರ ಟನ್ ಮಾತ್ರ ಪೂರೈಸಿ ಟೆಂಡರ್‌ನ್ನು ಪೂರ್ಣಮಾಡಲು ಭಾಟಿಯಾ ಕಂಪನಿಗೆ ತಿಳಿಸಲಾಗಿದೆ. ಇದಕ್ಕೆ ಭಾಟಿಯಾ ಕಂಪನಿಯವರು ಪತ್ರವನ್ನು ಬರೆದು ನಾವು ಈಗಾಗಲೇ ಕೆಪಿಸಿಎಲ್ ನಿಂದ ಪಡೆದ ಆದೇಶದಂತೆ 6 ಲಕ್ಷ ಟನ್ ಅಲ್ಲದೆ 15 ಪರ್ಸೆಂಟ್ ಹೆಚ್ಚುವರಿ ಪ್ರಮಾಣದಲ್ಲಿ ಕಲ್ಲಿದ್ದಲನ್ನು ಪೂರೈಸಲು ಅಂತಾರಾಷ್ಟ್ರೀಯ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿರುವುದರಿಂದ ಕೆಪಿಸಿಎಲ್ ನೀಡಿದ ಟೆಂಡರ್ fixed rate ಟೆಂಡರ್ ಆಗಿರುವುದರಿಂದ ಈ ಟೆಂಡರ್ ಪ್ರಮಾಣದಲ್ಲಿ ಕಡಿಮೆ ಮಾಡಿರುವುದರಿಂದ ನಮಗೆ ಹಾನಿಯಾಗಿದೆ ಎಂದು ಹೇಳಿ ಕನಿಷ್ಠ 6 ಲಕ್ಷ ಟನ್ ಖರೀದಿ ಮಾಡಲೇ ಬೇಕು ಎಂದು ವಿನಂತಿ ಮಾಡಿದರು. ಈ ಮಧ್ಯದಲ್ಲಿ ವಿದ್ಯುತ್‌ನ ಬೇಡಿಕೆ ಹೆಚ್ಚಾಗಿತ್ತು, ನಮ್ಮ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕಡಿಮೆ ಇತ್ತು, ಹೆಚ್ಚು ಕಲ್ಲಿದ್ದಲನ್ನು ಪಡೆಯುವ ಅವಶ್ಯಕತೆ ಇತ್ತು, ಅದಕ್ಕಾಗಿ ಕೆಪಿಸಿಎಲ್ ಮೂಲ ಆದೇಶದಲ್ಲಿ ತಿಳಿಸಿರುವಂತೆ ಕಲ್ಲಿದ್ದಲನ್ನು ಖರೀದಿ ಮಾಡುವುದು ಸೂಕ್ತವೆಂದು ಸಚಿವ ಸಂಪುಟದ ಉಪ ಸಮಿತಿ 18.07.2008ರಂದು ತೀರ್ಮಾನ ತೆಗೆದುಕೊಂಡರು. ಅದೇ ವಿಷಯವನ್ನು 22.04.2009 ರಂದು ಕೆಪಿಸಿಎಲ್ ಎಂ.ಡಿ.ಯವರಿಗೆ ತಿಳಿಸಿದ್ದೇನೆ. ಈ ಪತ್ರದ ಹಿಂದೆ ಯಾವುದೇ ದುರುದ್ದೇಶವಿಲ್ಲ. ನಿನ್ನೆ ಇದರ ಬಗ್ಗೆ ಚರ್ಚೆಯಾಗಿದೆ. ಬಹಳ ಮುಖ್ಯವಾಗಿ ಇಲ್ಲಿ ಚರ್ಚೆಯಾಗಬೇಕಾಗಿರುವಂಥದ್ದು, ನಾವು ಭಾಟಿಯಾ ಇಂಟರ್ ನ್ಯಾಷನಲ್ ಕಂಪನಿಗೆ ಪಾರದರ್ಶಕವಾಗಿ ಟೆಂಡರ್ ಕರೆದಾಗ ಇದ್ದ ಒಟ್ಟು ಮೊತ್ತವೇ 669 ಕೋಟಿ. ಅವರು 477 ಕೋಟಿ ಗುಳುಂ ಆಯಿತು ಕೆಪಿಸಿಎಲ್ ಗೆ ಎಂದು ಹೇಳಿದರು. ಅಂದರೆ ಅವರಿಗೆ ಕೊಟ್ಟಿರುವುದೇ 469

ಕೋಟಿ. ಇದು ಮೊದಲನೆಯದು. ಈ ಕಲ್ಲಿದ್ದಲು ವ್ಯವಹಾರ ಹೇಗೆ ನಡೆಯಿತು ಎಂಬುದನ್ನು ಈ ಮನೆಯ ಸದಸ್ಯರು ಶಾಂತವಾಗಿ ಕೇಳಬೇಕು. ಏಕೆಂದರೆ ಎಲ್ಲವೂ ದಾಖಲೆಯಲ್ಲಿದೆ. ಯಾರ್ಯಾರ ಕಾಲದಲ್ಲಿ ಏನೇನಾಗಿದೆ ಎಂಬುದು ಈ ನಾಡಿನ 6 ಕೋಟಿ ಜನರಿಗೆ ಈ ಮನೆಯ ಮೂಲಕ ಗೊತ್ತಾಗಬೇಕಾಗಿದೆ. ಈ ಕಲ್ಲಿದ್ದಲಿನ ವ್ಯವಹಾರದಲ್ಲಿ ಅನೇಕ ವರ್ಷಗಳಿಂದ ಅವ್ಯವಹಾರಗಳು ಕೆಪಿಸಿಎಲ್ ನಲ್ಲಿ ನಡೆದು ಬರುತ್ತಿದೆ ಎಂಬುದು ದಾಖಲೆಯ ಮೂಲಕ ನನಗೆ ತಿಳಿದು ಬಂತು. ಮೊದಲನೆಯದಾಗಿ, ಕಲ್ಲಿದ್ದನ್ನು ಸ್ವಚ್ಛ ಮಾಡುವ ವಿಚಾರದಲ್ಲಿ 2002 ರಿಂದ 2007ರವರೆಗೆ ಪ್ರತಿ ವರ್ಷ 58 ಲಕ್ಷ ಟನ್ ಕಲ್ಲಿದ್ದಲನ್ನು ಸ್ವಚ್ಛಗೊಳಿಸಿ ಕನಿಷ್ಟ 500 ಕೋಟಿಯಷ್ಟು ಹಣ pool ಆಗಿ ಹೋಗುತ್ತಿತ್ತು. ಕೇವಲ cleaning, washing ಗಾಗಿ ಇಷ್ಟು ಹಣ ಹೋಗುತ್ತಿತ್ತು. ಸ್ವಚ್ಛಗೊಳಿಸಲಾದ ಕಲ್ಲಿದ್ದಲಿನಿಂದ ಹಾನಿಯೇ ಹೊರತು ಯಾವುದೇ ಲಾಭ ಕೆಪಿಸಿಎಲ್ ಗೆ ಆಗಿರಲಿಲ್ಲ. ಪ್ರತಿ ವರ್ಷ 500 ಕೋಟಿ ರೂಪಾಯಿಗಳಂತೆ 2002 ರಿಂದ 2007ರವರೆಗೆ ಅಂದರೆ 7 ವರ್ಷದ ಅವಧಿಯಲ್ಲಿ ಒಟ್ಟಾರೆ 3500 ಕೋಟಿ ಹಣ ಕೆಪಿಸಿಎಲ್ ನಲ್ಲಿ ಲೂಟಿಯಾಯಿತು. ಇದನ್ನು ನಾನು ಬಂದ ಮೇಲೆ ಸಂಪೂರ್ಣವಾಗಿ ನಿಲ್ಲಿಸಿದ್ದೇನೆ. ಕಲ್ಲಿದ್ದಲನ್ನು wash ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದೇನೆ. ಎರಡನೆಯದಾಗಿ, ಕಲ್ಲಿದ್ದಲನ್ನು ಒರಿಸ್ಸಾದ ತಾಲ್ಚೇರಿಯಿಂದ ರಾಯಚೂರಿಗೆ ತರುವುದಕ್ಕೆ ನೇರವಾಗಿ ರೈಲು ಮಾರ್ಗ ಇದ್ದರೂ ಅದನ್ನು ಸಮುದ್ರ ಮಾರ್ಗದ ಮೂಲಕ ಪ್ಯಾರಾದ್ವೀಪ್ ಬಂದರಿನಿಂದ ಚೆನ್ನೈ ಬಂದರಿಗೆ ತಂದು ಅಲ್ಲಿಂದ ರಾಯಚೂರಿಗೆ ಮತ್ತೆ ರೈಲಿನ ಮೂಲಕ ತರುವ ವ್ಯವಸ್ಥೆಯನ್ನು 2003 ರಿಂದ 2008ನೇ ಇಸವಿಯವರೆಗೆ ಅನಾವಶ್ಯಕವಾಗಿ ಈ ಪುಣ್ಯಾತ್ಮರೆಲ್ಲಾ ಸೇರಿಕೊಂಡು ಮಾಡಿದರು. ಇದರಿಂದ ಒಟ್ಟು ದೂರ 1850 ಕಿಲೋ ಮೀಟರ್ ಆಯಿತು. ಅದನ್ನು 1500 ಕಿಲೋಮೀಟರ್‌ಗೆ ಇಳಿಸಿ ಸಂಪೂರ್ಣವಾಗಿ ರೈಲಿನ ಮೂಲಕ ತರಬಹುದಾಗುತ್ತು. ಆ ರೀತಿ ಮಾಡದೇ ಇದ್ದುದರಿಂದ ಪ್ರತಿ ಟನ್‌ಗೆ ಒಂದು ಸಾವಿರ ರೂಪಾಯಿ ಹಾನಿಯಾಯಿತು. ಒಟ್ಟು 18 ಲಕ್ಷ ಟನ್‌ಗೆ ಪ್ರತೀ ವರ್ಷ 180 ಕೋಟಿ ಹಾನಿಯಾಯಿತು. ಈ

ವ್ಯವಸ್ಥೆಯನ್ನು ಈಗ ಸಂಪೂರ್ಣ ರದ್ದುಗೊಳಿಸಿದ್ದೇವೆ. ಒಂದು, ಕಲ್ಲಿದ್ದಲನ್ನು wash ಮಾಡುವುದಕ್ಕೆ 500 ಕೋಟಿ ಪ್ರತಿ ವರ್ಷ ಈ ಕನ್ನಡ ನಾಡಿನ 6 ಕೋಟಿ ಜನರಿಗೆ ನಾಮ ಹಾಕುತ್ತಿದ್ದರು, ಅದನ್ನು ನಿಲ್ಲಿಸಿದ್ದೇವೆ. ಹಡಗಿನಿಂದ ತಂದು ಅನಂತರ ರೈಲಿನಲ್ಲಿ ತಂದು ಹೆಚ್ಚು ದೂರ ಮಾಡಿಕೊಂಡು ಒಂದು ಟನ್‌ಗೆ ಹೆಚ್ಚುವರಿ ಒಂದು ಸಾವಿರ ರೂಪಾಯಿ ವೆಚ್ಚ ಬರುವಂತೆ ಮಾಡಿ ಕೊಡುತ್ತಿದ್ದನ್ನು ನಿಲ್ಲಿಸಿದ್ದೇವೆ. ಇದರಿಂದ ಪ್ರತಿ ವರ್ಷ 180 ಕೋಟಿ ಕಡಿಮೆಯಾಯಿತು. ಮಾನ್ಯ ರೇವಣ್ಣನವರು ಇಂಧನ ಮಂತ್ರಿಯಾಗಿದ್ದಾಗ, ನಾನು ಉಪ ಮುಖ್ಯಮಂತ್ರಿಯಾಗಿದ್ದಾಗ, ಅವರ ತಮ್ಮ ಮುಖ್ಯಮಂತ್ರಿಯಾಗಿದ್ದಾಗ ಇದೇ ಟೆಂಡರ್‌ನ್ನು 36 ಪರ್ಸೆಂಟ್‌ಗೆ ಹೆಚ್ಚಿನ ದರ, 1795 ಕೋಟಿಯಿಂದ 2374 ಕೋಟಿಗೆ ನೀಡಿ ಚೆನ್ನೈ ಮೂಲದ ಶ್ರೀ ಎಂ.ಎ.ಎಂ. ರಾಮಸ್ವಾಮಿ ಮಾಲೀಕತ್ವದ ಸೌತ್ ಇಂಡಿಯಾ ಕಾರ್ಪೊರೇಷನ್‌ಗೆ 6.10.2007 ರಲ್ಲಿ ನೀಡಿದರು. ತರಾತುರಿಯಲ್ಲಿ ಟೆಂಡರ್‌ನ್ನು ರೇವಣ್ಣನವರೇ ಸಚಿವರಾಗಿದ್ದಾಗ ನೀಡಿದರು. ದಾಖಲೆಗಳನ್ನೆಲ್ಲಾ ಇಲ್ಲಿ ತಂದು ಇಡುತ್ತಲೇ. ಪ್ರದರ್ಶನ ಮಾಡುತ್ತಲೇ. ಪ್ರತಿವರ್ಷ 180 ಕೋಟಿ ಇವರ ನಡವಳಿಕೆಯಿಂದ ನಷ್ಟವಾಯಿತಲ್ಲಾ, ಇದು ಯಾರಿಗೆ ನಷ್ಟವಾಯಿತು ಸ್ವಾಮಿ? ಶ್ರೀಸಾಮಾನ್ಯ ಬಡವರ ತೆರಿಗೆಯ ಹಣ ಇದು. ಕಲ್ಲಿದ್ದಲಿನ ಉಪಯೋಗ ಮತ್ತು ದಾಸ್ತಾನಿನ ವಿಷಯದಲ್ಲಿ ಕೆಲವು ಮಾರ್ಪಾಡುಗಳನ್ನು ನಾವು ಮಾಡಿದ್ದರಿಂದ ಕೆಪಿಸಿಎಲ್ ಗೆ ಸುಮಾರು 50 ಕೋಟಿ ಜೊತೆಗೆ 930 ಕೋಟಿ ನಷ್ಟವನ್ನು ತಪ್ಪಿಸಿದ್ದೇವೆ. ಇದು 26.09.2009ರ ಕೆಪಿಸಿಎಲ್ ನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವರದಿ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಯಾರಿಗೆ ಬೇಕಾದರೂ ನಾನು ಒದಗಿಸುತ್ತೇನೆ. ಸರ್ಕಾರ ಹೆಚ್ಚುವರಿ 6 ಲಕ್ಷ ಟನ್ ಕಲ್ಲಿದ್ದಲನ್ನು ಕೆಪಿಸಿಎಲ್ ನಿಂದ ಖರೀದಿಸಿದ್ದು, ಬೇರೆ ರಾಜ್ಯಗಳು ಮಾಡಿದ ಹಾಗೆ ಆದೇಶ ಹೊರಡಿಸಿದ್ದು, ಅದನು ಭಾರತ ಸರ್ಕಾರ ಎಂ.ಎಂ.ಟಿ.ಸಿ. ಮೂಲಕ ಖರೀದಿ ಮಾಡಿದ್ದೇವೆ. ಭಾಟಿಯಾ ಕಂಪನಿಗೆ ಟೆಂಡರ್ ಮುಖಾಂತರದ ಬೆಲೆಯನ್ನೇ ಎಂ.ಎಂ.ಟಿ.ಸಿ.ಗೆ ನೀಡಲಾಗಿದೆ. ಹೀಗಿರುವಾಗ

1.50 ಪಿ.ಎಂ.

ಸದರಿ ಪ್ರಕರಣದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಮಾನ್ಯ ರೇವಣ್ಣನವರೆ, ಒಂದು ಮಾತನ್ನು ಇವತ್ತು ಹೇಳಲು ಇಚ್ಛೆ ಪಡುತ್ತೇನೆ. ದಯಮಾಡಿ ದಾಖಲೆಗಳು ಯಾರ್ಯಾರ ಕಾಲದಲ್ಲಿ ಏನೇನು ಆಯಿತು ಎಂದು ಎಲ್ಲವನ್ನೂ ಹೇಳುತ್ತವೆ. ತಾವು ಆ ಇಲಾಖೆಯ ಸಚಿವರಾಗಿ ಅನುಭವ ಇದ್ದರೂ ಕೂಡ ಅನಗತ್ಯವಾಗಿ ಕಲ್ಲಿದ್ದಲನ್ನು wash ಮಾಡಿಸಿ ಪ್ರತಿವರ್ಷ 500 ಕೋಟಿ ಪಂಗನಾಮವನ್ನು ಹಾಕಿ, ಯಾರೋ ನಿಮಗೆ ಬೇಕಾದಂಥ ರಾಜ್ಯಸಭಾ ಸದಸ್ಯರಿಗೆ ಎಲ್ಲೋ ಸುತ್ತಿಬಳಸಿ ಕಲ್ಲಿದ್ದಲನ್ನು ತರುವಂತೆ ಮಾಡಿ ಒಂದು ಟನ್‌ಗೆ ಒಂದು ಸಾವಿರ ಜಾಸ್ತಿ ಕೊಟ್ಟು, ಮಾಡಿದ್ದನ್ನು ನಾವು ಅವೆಲ್ಲವನ್ನು ಕಡಿಮೆ ಮಾಡಿಸಿ ಇವತ್ತು ಅದರ ಬಗ್ಗೆ ಜಸ್ಟೀಸ್ ಮೋಹನ್ ಕುಮಾರ್‌ರವರು ತನಿಖೆ ಮಾಡುತ್ತಿದ್ದಾರೆ. ಇವತ್ತು Justice Mohan Kumar ರವರು washing of coal ಬಗ್ಗೆ, 36% ಹೆಚ್ಚಿಗೆ ಕೊಟ್ಟಿದ್ದರ ಬಗ್ಗೆ enquiry ಮಾಡುತ್ತಿದ್ದಾರೆ. ಮಾನ್ಯ ಜಯಚಂದ್ರರವರೆ, ಇನ್ನು transformer ಇನ್ನಿತರ ವಿಚಾರಗಳ ಬಗ್ಗೆ ಹೇಳುವುದಾದರೆ ಇನ್ನೂ ಎರಡು ದಿವಸ ಬೇಕಾಗುತ್ತದೆ. ಇವೆಲ್ಲಾ ಏನೇನು ನಡೆಯಿತು ? ಎಲ್ಲೆಲ್ಲಿಂದ ತಂದರು ?ಏಕೆ ಖರೀದಿ ಮಾಡಿ ಇಟ್ಟುಕೊಂಡರು ? ಅಗತ್ಯವಿಲ್ಲದಿದ್ದರೂ ಏಕೆ ತಂದು ಇಟ್ಟುಕೊಂಡರು ? ಮಾನ್ಯ ಈಶ್ವರಪ್ಪ ಅಥವಾ ಯಡಿಯೂರಪ್ಪನ ಕಾಲದಲ್ಲಿ ಆ ರೀತಿ ಅನಗತ್ಯವಾಗಿ ಖರೀದಿ ಮಾಡಿರುವ ಬಗ್ಗೆ ಒಂದು ಉದಾಹರಣೆಯನ್ನು ಕೊಟ್ಟರೆ, ಒಂದು ಕ್ಷಣವೂ ನಾನು ಇಲ್ಲಿ ನಿಂತುಕೊಳ್ಳುವುದಿಲ್ಲ. ನಾನು ಇಷ್ಟೇ ಮಾನ್ಯ ರೇವಣ್ಣನವರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ರೇವಣ್ಣನವರೆ, ನಿನ್ನೆ ನೀವು ಮಾಡಿದ ಭಾಷಣವನ್ನು ನಾನು ಕೇಳಿದ್ದೇನೆ. ಸಚಿವರಾಗಿದ್ದವರು, ಜವಾಬ್ದಾರಿ ಸ್ಥಾನದಲ್ಲಿ ನಿಂತು ಅಲ್ಲಿ ನೀವು ಮಾತನಾಡಬೇಕಾದರೆ

ಶ್ರೀ ಟಿ.ಬಿ. ಜಯಚಂದ್ರ : ಕಲ್ಲಿದ್ದಲು ತೊಳೆದರೆ ಲಾಭವೇನು ? ತೊಳೆಯದಿದ್ದರೆ ಆಗುವ ಲಾಭವೇನು ? ಅದರ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗಿಂತ ಚೆನ್ನಾಗಿ ನಿಮಗೆ ನಮಗೆ ಏನು ಗೊತ್ತು ಸ್ವಾಮಿ ?

(ಗೊಂದಲ)

ಅಧ್ಯಕ್ಷರು : ಇಲ್ಲಿ ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೊಂದು ಕರ್ಮಕಥೆ. ಇದರ ಬಗ್ಗೆ ಮಾನ್ಯ ಸಿದ್ರಾಮಣ್ಣನಿಗೂ ಗೊತ್ತು. ನಿಮಗೂ ಗೊತ್ತು. ಅದರ ಬಗ್ಗೆ ಈಗ ಚರ್ಚೆ ಮಾಡುವುದು ಬೇಡ. ನಾನು ನಿಮಗೆ ಇಷ್ಟೇ ಹೇಳಬಯಸುತ್ತೇನೆ. ನಾನು ಬಂದ ಮೇಲೆ ಕಲ್ಲಿದ್ದಲು ತೊಳೆಸಲಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಯಡಿಯೂರಪ್ಪನವರೆ, ಕಲ್ಲಿದ್ದಲು ತೊಳೆದಿದ್ದರಿಂದ 500 ಕೋಟಿ ರೂ.ಗಳ ನಷ್ಟವಾಗಿದೆ ಎಂದು ಹೇಳುತ್ತೀರಿ. It is not a small amount.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನೇ ನಾನು ಅವರಿಗೆ ಕೇಳುತ್ತಿರುವುದು ?

ಶ್ರೀ ಸಿದ್ದರಾಮಯ್ಯ : ನೀವು ಈಗ ರಾಜ್ಯಕ್ಕೆ, ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿದೆ, ಅವ್ಯವಹಾರವಾಗಿದೆ ಎಂದು ಹೇಳಿದ ಮೇಲೆ, ಏಕೆ ನೀವು ಇದನ್ನು ಸಿ.ಬಿ.ಐ.ಗೆ ಕೊಡಬಾರದು ? ಇದನ್ನು ಸಿ.ಬಿ.ಐ.ಗೆ ಕೊಟ್ಟುಬಿಡಿ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದರಿಂದ ನಿಮ್ಮ ಮೇಲಿರುವುದೂ ತಪ್ಪಿ ಹೋಗುತ್ತದೆ. ಅವರ ಮೇಲಿರುವುದು ಅಲ್ಲಿಗೆ ಹೋಗಲಿ ಬಿಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೇನು ಕುಸ್ತಿ ಆಕಾಡವೇ ?

(ಗೊಂದಲ)

ಅಧ್ಯಕ್ಷರು : ಏನಿದು ? ನೀವು ಮಾತನಾಡುವ ಧಾಟಿ ಸರಿಯೇ ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಿ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾವು ತಿಂದಿದ್ದೇವೆ ಎನ್ನುವುದಾದರೆ, ಇದನ್ನು ಸಿ.ಬಿ.ಐ.ಗೆ ಕೊಡಿ. ನಮ್ಮನ್ನು ಜೈಲಿಗೆ ಹಾಕಿ ನೋಡೋಣ. ನಾವು ಅದಕ್ಕೆ ರೆಡಿ ಇದ್ದೇವೆ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದು ಮಾತನ್ನು ನಮ್ಮ ಪ್ರತಿಪಕ್ಷದ ನಾಯಕರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಈ ವಿಷಯವನ್ನು Justice Mohan Kumar ಮಾಡುತ್ತಿದ್ದಾರೆ. ಇವತ್ತೂ ಕೇಸ್ ಇದೆ .

(ಗೊಂದಲ)

ಅಧ್ಯಕ್ಷರು : ಚರ್ಚೆಗೆ ಅವಕಾಶವಿಲ್ಲವೆಂದು ಹೇಳಿದರೂ ಸಹ ಮತ್ತೆ ಮತ್ತೆ ಏಕೆ ಮಾತನಾಡುತ್ತೀರಿ ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾವು ಜೈಲಿಗೆ ಹೋಗಲಿಕ್ಕೆ ರೆಡಿ ಇದ್ದೇವೆ. ಇದನ್ನು ಸಿ.ಬಿ.ಐ.ಗೆ ಕೊಡಿ.

(ಗೊಂದಲ)

ಅಧ್ಯಕ್ಷರು : ನೀವು ಹೇಳಿದ ಹಾಗೆ ಇಲ್ಲಿ ಸದನ ನಡೆಸುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಬಡ ಜನರ ದುಡ್ಡನ್ನು ರೇವಣ್ಣ ಯಾವ ರೀತಿಯಾಗಿ ಲೂಟಿ ...

(ಗೊಂದಲ)

ಅಧ್ಯಕ್ಷರು : ಯಾವುದೂ ದಾಖಲೆಗೆ ಹೋಗುವುದಿಲ್ಲ. ನೀವು ಏನು ಬೇಕಾದರೂ ಮಾತನಾಡಿಕೊಳ್ಳಿ. ಅವರು ಮಾತನಾಡಿದ್ದು ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು : ನೀವು ಮಾತನಾಡಿದ್ದು ಯಾವುದೂ ಸಹ ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಏನು ಮಾತನಾಡಿದರೂ ಸಹ ಅದು ದಾಖಲೆಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಹೇಳುವುದನ್ನು ಹೇಳಿದ್ದೀರಿ. Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇದೇ ಮನೆಯಲ್ಲಿ ...

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ, ನೀವು ಕುಳಿತುಕೊಂಡೂ ಮಾತನಾಡುತ್ತೀರಿ, ಎದ್ದು ನಿಂತೂ ಮಾತನಾಡುತ್ತೀರಿ ? ಏನು ಎಲ್ಲಾ ನಿಮ್ಮದೇನಾ ? ಏನು ತೀರ್ಮಾನವಾಗಿದೆಯೇ ಅದರಂತೆ ನಡೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನೀವು ಹೇಳುವುದನ್ನೆಲ್ಲಾ ಹೇಳಿದ್ದೀರಿ. ಮತ್ತೆ ಮತ್ತೆ ಮಧ್ಯದಲ್ಲಿ ಎದ್ದು ನಿಂತು ಏಕೆ ಮಾತನಾಡುತ್ತೀರಿ ?

(ಗೊಂದಲ)

ಅಧ್ಯಕ್ಷರು : ಇದು ಬಹಳ ಅತಿಯಾಯಿತು ಎನ್ನುವ ಮಾತನ್ನು ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ತಮ್ಮ ಹೆಸರನ್ನು ಹೇಳಬೇಕಾಗುತ್ತದೆ. I will name you.

(ಗೊಂದಲ)

ಅಧ್ಯಕ್ಷರು : ನಾನು ರೇವಣ್ಣನವರ ಹೆಸರನ್ನು ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದರೆ ಮಧ್ಯೆದಲ್ಲಿ ಎದ್ದು ನಿಂತು ಏನು ಹೇಳುತ್ತೀರಿ ? ಅವರ ಹೇಳಿದ್ದನ್ನು ತಾಳ್ಮೆಯಿಂದ ಕೇಳಿ, Clarification ಬೇಕಾದರೆ ಅದನ್ನು ನೀವು ಕೇಳಬಹುದು.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಚರ್ಚೆಯೇ ಇನ್ನೂ ಪೂರ್ತಿಯಾಗಿಲ್ಲ. ಇನ್ನು ಉತ್ತರ ಎಲ್ಲಿಂದ ಕೊಡಿಸುತ್ತೀರಿ ? ಮೊದಲು ಪೂರ್ಣ ಚರ್ಚೆಯಾಗಲಿ.

(ಗೊಂದಲ)

ಅಧ್ಯಕ್ಷರು : ಚರ್ಚೆಯಾಗಬೇಕೆಂದರೆ, ಇದನ್ನು ಬೇರೆ ನಿಯಮದ ಅಡಿಯಲ್ಲಿ ತನ್ನಿ, ನನ್ನ ಕೊಠಡಿಯಲ್ಲಿ ಏನು ತೀರ್ಮಾನವಾಗಿದೆಯೋ, ಅಷ್ಟಕ್ಕೆ ಮಾತ್ರ ಸೀಮಿತವಾಗಬೇಕು.

ಶ್ರೀ ಎಂ.ಟಿ. ಕೃಷ್ಣಪ್ಪ : ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ಚರ್ಚೆಗೆ ಅವಕಾಶ ಕೊಡಿ ಎಂದರೆ, ನೀವು ಹೇಳಿದ ಹಾಗೆ ಕೊಡುವುದಕ್ಕಾಗುವುದಿಲ್ಲ. ಅದಕ್ಕಾಗಿ ನೀತಿ ನಿಯಮ ಇದೆ. ನೀವು ಕೇಳಿದಾಗಲೆಲ್ಲಾ ಅವಕಾಶ ಕೊಡುವುದಕ್ಕಾಗುವುದಿಲ್ಲ. ನಿಯಮಾವಳಿ ಬಿಟ್ಟು ಏನು ಮಾತನಾಡುತ್ತೀರಿ ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಇದನ್ನು ಸಿ.ಬಿ.ಐ.ಗೆ ಕೊಡಿ ಅಥವಾ ಲೋಕಾಯುಕ್ತಕ್ಕಾದರೂ ಕೊಡಿ.

(ಗೊಂದಲ)

ಅಧ್ಯಕ್ಷರು : ಆಯಿತು, ನಿಮ್ಮ ಬೇಡಿಕೆ ಇಟ್ಟಿದ್ದೀರಿ. ಈಗ it is left to the Government. ಇದರ ಬಗ್ಗೆ ಕುಳಿತುಕೊಂಡು ಮತ್ತೆ ಮತ್ತೆ ಏನು ಚರ್ಚೆ ಮಾಡುತ್ತೀರಿ ?

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನೋಡಿ, ಚರ್ಚೆಗೆ ಅವಕಾಶವಿಲ್ಲ ಎನ್ನುವ ಮಾತನ್ನು ಹೇಳಿದ್ದೇನೆ. ಮತ್ತೆ ಮತ್ತೆ ಏಕೆ ಆ ಬಗ್ಗೆ ಕೇಳುತ್ತೀರಾ ? ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ Justice Mohan Kumarರವರು ಇದರ ಬಗ್ಗೆ enquiry ಮಾಡುತ್ತಿದ್ದಾರೆ ...

(ಗೊಂದಲ)

ಅಧ್ಯಕ್ಷರು : ಮುಗಿಸಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರನ್ನು ಮುಗಿಸಬೇಕು ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈ ನಾಡಿನ ಆರು ಕೋಟಿ ಜನರಿಂದ ಆಶೀರ್ವಾದ ಪಡೆದು ಇಲ್ಲಿ ಕುಳಿತಿದ್ದೇನೆ...

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಮಾಡಬಾರದ್ದನ್ನೆಲ್ಲಾ ಮಾಡಿದ್ದೇನೆ ಎಂದು ಹೇಳಿರುವುದು ನಾನಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ನಾನು ಮಾಡಬಾರದ್ದನ್ನೆಲ್ಲಾ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅದಕ್ಕಾಗಿ

ಸಾರ್ವಜನಿಕವಾಗಿ ಕ್ಷಮೆ ಕೇಳಿದ್ದಾರೆ. ಪತ್ರಿಕೆಗಳ ಮೂಲಕ ಇಡೀ ರಾಜ್ಯದ ಜನತೆಯ ಕ್ಷಮೆ ಕೇಳಿರುವುದು ನಾನಲ್ಲ. 18 ತಿಂಗಳಿನಲ್ಲಿ ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಮಾಡಬಾರದ್ದನ್ನೆಲ್ಲಾ ಮಾಡಿದ್ದೇನೆ ಎಂದು ಹೇಳಿರುವುದು ನಾನಲ್ಲ. ಅದು ಕಡತದಲ್ಲಿದೆ, ಬೇಕಾದರೆ ತೆಗೆಸಿ. ಅದನ್ನೆಲ್ಲಾ ಈ ರಾಜ್ಯದ ಜನತೆ ಇನ್ನೂ ಮರೆತಿಲ್ಲ. ಉಮೇಶ್ ಕತ್ತಿಯವರದ್ದು ಕೋ–ಜನರೇಷನ್‌ದು 3 ರೂಪಾಯಿ ಇರುವುದನ್ನು ಏಳೂವರೆ ರೂಪಾಯಿ ಮಾಡಿದರು ಅದಕ್ಕೆ ಪಾಪ ಅವರು ವಕಾಲತ್ ಮಾಡುತ್ತಿದ್ದಾರೆ, ಕೋ–ಜನರೇಷನ್ ಒಂದಲ್ಲೇ 350 ಕೋಟಿ ಲೂಟಿ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಅಂಕಿಅಂಶಗಳನ್ನೊಳಗೊಂಡಂತೆ ಇವತ್ತು ತನಿಖೆ ನಡೆಯುತ್ತಿದೆ, ಅದೆಲ್ಲಾ ಹೊರಬರಲಿ, ಎಲ್ಲಾ ದಾಖಲೆಗಳನ್ನು ಈ ನಾಡಿನ 6 ಕೋಟಿ ಜನರ ಮನೆ ಬಾಗಿಲಿಗೆ ಈ ಹಣೆಬರಹಗಳನ್ನೆಲ್ಲಾ ಅಂಕಿಅಂಶಗಳೊಂದಿಗೆ ತಲುಪಿಸುವಂಥ ಕೆಲಸವನ್ನು ಮಾಡೋಣ.

(ಗೊಂದಲ)

ಅಧ್ಯಕ್ಷರು : ರೇವಣ್ಣನವರೆ, ನೀವು ಒಬ್ಬ ಹಿರಿಯ ಸದಸ್ಯರಾಗಿ ಈ ರೀತಿ ವರ್ತನೆ ಮಾಡಿದರೆ, ಏನು ಹೇಳಬೇಕು ಹೇಳಿ. ಅವರು ನಿಮ್ಮ ಕ್ಲಾರಿಫಿಕೇಷನ್‌ಗೆ ಉತ್ತರ ಕೊಡುವಾಗ ಪ್ರತಿಯೊಂದಕ್ಕೂ ಎದ್ದು ನಿಲ್ಲುತ್ತೀರಲ್ಲಾ, this is ti much. ಒಬ್ಬ ಹಿರಿಯ ಸದಸ್ಯರಾಗಿ ನಿಮಗೆ ಒಂದು ನೀತಿನಿಯಮ ಯಾವುದೂ ಇಲ್ಲವೇ ? ನಾವು ಮಾತನಾಡುವಾಗ ಈ ನಿಯಮಾವಳಿಗಳನ್ನು ಬಿಟ್ಟೇ ಮಾತನಾಡುವುದೆಂದು ಹೇಳಿಬಿಡಿ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದೇ ಅವಧಿಯಲ್ಲಿ ಈ ದೇಶದ ಅನೇಕ ರಾಜ್ಯಗಳಲ್ಲಿ ಕಲ್ಲಿದ್ದಲನ್ನು ಖರೀದಿ ಮಾಡಿದ್ದಾರೆ, ಯಡಿಯೂರಪ್ಪ ಒಬ್ಬರೇ ಅಲ್ಲ, ಕರ್ನಾಟಕ ಮಾತ್ರವಲ್ಲ ....

(ಗೊಂದಲ)

ಅಧ್ಯಕ್ಷರು : ಸಭಾ ನಾಯಕರು ಮಾತನಾಡುವಾಗ ಮಾತನಾಡಬಾರದೆಂಬ ಸಾಮಾನ್ಯ ಸೌಜನ್ಯವೂ ಇಲ್ಲವಲ್ಲಾ, ಇದೇನಿದು ?

ಶ್ರೀ ಬಿ.ಎಸ್. ಯಡಿಯೂರಪ್ಪ : ಆದುದರಿಂದ, ಈಗಾಗಲೇ ಜಸ್ಟೀಸ್ ಮೋಹನ್ ಕುಮಾರ್ ಅವರಿಂದ ತನಿಖೆಯಾಗುತ್ತಿರುವುದರಿಂದ, ಆ ತನಿಖಾ ವರದಿ ಹೊರಗೆ ಬರಲಿ, ಯಾರದೇನು ಎಂದು ಬಣ್ಣ ಬಯಲಾಗಲಿ. ರೇವಣ್ಣನವರು ಅಪೇಕ್ಷೆಪಟ್ಟರೆ, ಈ ಮನೆ ಅಪೇಕ್ಷೆ ಪಟ್ಟರೆ, ತಾವು PWD ಸಚಿವರಾಗಿದ್ದಾಗ, ಪವರ್ ಮಿನಿಸ್ಟರ್ ಆಗಿದ್ದಾಗ, ಹೀಗೆ ಹತ್ತಾರು ಉದಾಹರಣೆಗಳಿದ್ದಾವೆ. ನಿಮಗೆ ಪ್ರತಿನಿತ್ಯ ಯಾವ್ಯಾವ ಮಾಹಿತಿ ನಿಮಗೆ ಬೇಕೆನ್ನುತ್ತೀರೊ ಎಲ್ಲಾ ದಾಖಲೆಗಳನ್ನು ಈ ಮನೆಗೆ ತಂದಿಡುತ್ತೇನೆ. ಏನೇನಾಯಿತು, ಟೆಂಡರ್ ಪ್ರಕ್ರಿಯೆ ಹೇಗಾಯಿತು, ಎಷ್ಟಿಮೇಟ್ ಏನಾಯಿತು, ಹೇಗೆಲ್ಲ ಏಜೆನ್ಸಿಗೆ ಕೊಟ್ಟಿದ್ದಿರಿ,. ಅನೇಕ ಚರಿತ್ರೆಗಳ ವಿವರಗಳಿದ್ದಾವೆ. ಕೇವಲ ಒಂದನ್ನು ಬಿಚ್ಚಿಟ್ಟಿದ್ದೇನೆ ಅದನ್ನು ಜೀರ್ಣ ಮಾಡಿಕೊಳ್ಳಿ, ಉಳಿದದ್ದಕ್ಕೆ ಸಮಯ ಬಂದಾಗ ನಾನು ನಿಮಗೆ ಉತ್ತರ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗಿದೆ, ಈ ವಿಷಯ ಇಲ್ಲಿಗೆ ಮುಕ್ತಾಯಗೊಂಡಿದೆ, ಮತ್ತೆ ಮತ್ತೆ ನೀವು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ, ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮಧ್ಯಾಹ್ನಾ 2 ಗಂಟೆ 4 ನಿಮಿಷಕ್ಕೆ ಮುಂದೂಡಲಾಯಿತು)

(ಸದನದ ಕಲಾಪವು 3 ಗಂಟೆ 20 ನಿಮಿಷಕ್ಕೆ ಪ್ರಾರಂಭವಾಯಿತು.

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಶಾಸನ ರಚನೆ, ವಿಧೇಯಕವನ್ನು ಹಿಂದಕ್ಕೆ ಪಡೆಯುವುದು.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ, ಅದನ್ನು ಏನು ಮಂಡನೆ ಮಾಡುವುದಿಲ್ಲವೇ?